# ಭಾರತೀಯ ಜನತಾ ಪಾರ್ಟಿ

(ಕೇಂದ್ರ ಕಚೇರಿ)
11, ಅಶೋಕ ರಸ್ತೆ, ನವದೆಹಲಿ-110001
ದೂರವಾಣಿ ಸಂಖ್ಯೆ: 23005700,ಫ್ಯಾಕ್ಸ್: 23005787

ದಿನಾಂಕ: ಫೆಬ್ರವರಿ 28, 2014

ಭಾಜಪ ರಾಷ್ಟ್ರೀಯ ವಕ್ತಾರ ಮತ್ತು ಸಂಸದ ಶ್ರೀ ಪ್ರಕಾಶ್ ಜಾವ್ಡೆಕರ್ ಪತ್ರಿಕಾ ಪ್ರಕಟಣೆ

1. ಭಾಜಪ ರೂಪಿಸಿರುವ ಆರ್ಥಿಕ ದೂರದೃಷ್ಟಿತ್ವದ ಆಯಾಮಗಳನ್ನು ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿ ಶ್ರೀ ನರೇಂದ್ರ ಮೋದಿ ಅವರು ಮಂಡಿಸಿದ್ದು, ಇದರ ಕುರಿತು ಮುಕ್ತ ಪರ್ಯಾಲೋಚನೆ ನಡೆಸಬೇಕು ಎಂದು ನಾವು ಕಾಂಗ್ರೆಸ್‌ಗೆ ಸವಾಲು ಹಾಕುತ್ತೇವೆ. ಶ್ರೀ ನರೇಂದ್ರ ಮೋದಿ ಅವರ ಭಾಷಣದಲ್ಲಿ ಸದಾ ಲೋಪ ಹುಡುಕುವ ಕಾಂಗ್ರೆಸಿಗರು, ಅವರು ಮಂಡಿಸಿದ ಸ್ಪಷ್ಟ ಆರ್ಥಿಕ ಮಾರ್ಗಸೂಚಿಯ ಕುರಿತು ಮೌನ ಸಾಧಿಸಿದ್ದಾರೆ.

   ಆರ್ಥಿಕ ಪುನಶ್ಚೇತನಕ್ಕೆ ಮೋದಿ ಅವರು ಹಲವಾರು ಮಾರ್ಗೋಪಾಯಗಳನ್ನು ಸೂಚಿಸಿದ್ದಾರೆ. ಬಂಡವಾಳ ಆಕರ್ಷಿಸಲು ಹಾಗೂ ಸ್ಥಿರ ಆಡಳಿತ ನೀಡಲು ವಿಶ್ವಾಸಾರ್ಹತೆ ಮುಖ್ಯ ಎಂದು ಅವರು ತಿಳಿಸಿದ್ದಾರೆ. ತ್ವರಿತ ಗತಿಯ ನಿರ್ಣಯ ಪ್ರಕ್ರಿಯೆ ಮತ್ತು ಉತ್ತಮ ಆಡಳಿತ ಪದ್ಧತಿಗಳ ಅನುಸರಣೆ. ನೀತಿ ಘೋಷಣೆಗಿಂತ ನೀತಿ ಅನುಷ್ಠಾನಕ್ಕೆ ಹೆಚ್ಚಿನ ಮಾನ್ಯತೆ. ಅಭಿವೃದ್ಧಿಯು ಜನಾಂದೋಳನವಾಗಿ ರೂಪುಗೊಳ್ಳುವುದು. ಮೂಲಭೂತ ಸೌಕರ್ಯ ಮತ್ತು ಕೌಶಲ್ಯವೃದ್ಧಿ ಮೂಲಕ ಉದ್ಯೋಗ ಸೃಷ್ಟಿಸಲು ಸಾರ್ವಜನಿಕ ಹಣ ಹೂಡಿಕೆ. ಪ್ರಜಾಪ್ರಭುತ್ವ ಮತ್ತು ಪ್ರಜೆಗಳ ಬೇಡಿಕೆಗಳ ಈಡೇರಿಕೆಗೆ ಸೂಕ್ತ ಕಾರ್ಯಕ್ರಮ ರೂಪಿಸುವುದು, ಇವೇ ಮೋದಿ ಅವರ ಆರ್ಥಿಕ ಸಿದ್ಧಾಂತಗಳ ಸಾರವಾಗಿದೆ.

   ನಿನ್ನೆ ನವದೆಹಲಿಯಲ್ಲಿ ಅವರು ಮಾಡಿದ ಮೂರು ತಾಸುಗಳ ಭಾಷಣದಲ್ಲಿ ಯುಪಿಎ ಸರ್ಕಾರದ ವೈಫಲ್ಯಗಳ ನಿಖರ ವಿಶ್ಲೇಷಣೆ ಮಾಡಿದ್ದಾರೆ. ಆರ್ಥಿಕ ಪುನಶ್ಚೇತನಕ್ಕೆ ಯೋಗ್ಯ ಮಾರ್ಗದರ್ಶನ ನೀಡಿದ್ದಾರೆ. ಅವರು ಮಂಡಿಸಿದ ವಿಚಾರಗಳನ್ನು ಕಾಂಗ್ರೆಸ್ ಸವಾಲಾಗಿ ಸ್ವೀಕರಿಸಲಿ ಮತ್ತು ಅವರ ಆಲೋಚನೆಗಳ ಕುರಿತು ಚರ್ಚೆ ಆರಂಭಿಸಲಿ.

2. ಕಳೆದ 10 ತಿಂಗಳಲ್ಲಿ 10 ನೌಕಾ ದುರ್ಘಟನೆಗಳು ಸಂಭವಿಸಿರುವುದನ್ನು ಗಮನಿಸಿದಾಗ, ನಮ್ಮ ನೌಕಾ ಪಡೆಯ ಹೀನಾಯ ಸ್ಥಿತಿಗತಿ ಎದುರಾಗುತ್ತದೆ. ನಮ್ಮ ರಕ್ಷಣಾ ಪಡೆಯ ಬಹು ಮುಖ್ಯ ಅಂಗವಾದ ನೌಕಾಪಡೆಯ ಬೇಡಿಕೆಗಳನ್ನು ಕಡೆಗಣಿಸಿದ ಯುಪಿಎ ಸರ್ಕಾರ, ಇಂದು ಎದುರಾಗಿರುವ ಪರಿಸ್ಥಿತಿಯ ಹೊಣೆ ಹೊರಬೇಕಾಗುತ್ತದೆ. ನೌಕಾ ಮುಖ್ಯಸ್ಥರು ರಾಜಿನಾಮೆ ನೀಡಿದ್ದಾರೆ. ನೌಕಾ ಪಡೆಯಲ್ಲಿ ಸಂಭವಿಸುತ್ತಿರುವ ದುರ್ಘಟನೆಗಳನ್ನು ಮನಗೊಂಡು ಮನನೊಂದ ಮುಖ್ಯಸ್ಥರು ರಾಜಿನಾಮೆ ನೀಡಿದ್ದಾರೆ ಎಂದು ರಕ್ಷಣಾ ಖಾತೆ ಸಚಿವರು

ಸಮಜಾಯಿಶಿ ನೀಡಿದ್ದಾರೆ. ಆದರೆ ಪ್ರಸ್ತುತ ಪರಿಸ್ಥಿತಿಗೆ ರಕ್ಷಣಾ ಸಚಿವರೇ ಮುಖ್ಯ ಕಾರಣವೆಂದು ಮನಗಾಣಬೇಕಾಗುತ್ತದೆ. ರಕ್ಷಣಾ ಸಿಬ್ಬಂದಿಗಳ ಸಾವು, ಆಸ್ತಿ ನಷ್ಟ ಮತ್ತು ದೇಶಕ್ಕೆ ಆಗಿರುವ ಅವಮಾನದಿಂದ ಪ್ರಧಾನ ಮಂತ್ರಿಗಳಿಗೆ ಮತ್ತು ರಕ್ಷಣಾ ಖಾತೆ ಸಚಿವರಿಗೆ ನೋವಾಗಿಲ್ಲವೇ ಎಂಬುದು ರಾಷ್ಟ್ರವ್ಯಾಪಿ ಎದ್ದಿರುವ ಪ್ರಶ್ನೆ. ಆದ್ದರಿಂದ ರಕ್ಷಣಾ ಖಾತೆ ಸಚಿವರು ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಬೇಕಾಗಿದೆ. ಇಬ್ಬರು ನೌಕಾ ಅಧಿಕಾರಿಗಳ ಸಾವಿಗೆ ಭಾಜಪ ಸಂತಾಪ ವ್ಯಕ್ತಪಡಿಸುತ್ತದೆ. ನೌಕಾಪಡೆಯ ಅನುದಾನ ಹಂಚಿಕೆ ಮತ್ತು ಅಗತ್ಯ ಉಪಕರಣಗಳ ಖರೀದಿ ವಿಚಾರಗಳಲ್ಲಿ ರಕ್ಷಣಾ ಸ್ಥಾಯಿ ಸಮಿತಿ ವರದಿಗಳು ನೌಕಾಪಡೆಯ ಅಗತ್ಯಗಳ ನಿರ್ಲಕ್ಷ್ಯದ ಕುರಿತು ಹಲವಾರು ಬಾರಿ ಪ್ರಸ್ತಾಪಿಸಿತ್ತು. ನಮ್ಮ ಜಲಾಂತರ್ಗಾಮಿ ನೌಕೆಗಳು ಹಳೆಯದಾಗಿದ್ದು, ಶಿಥಿಲ ಸ್ಥಿತಿಯಲ್ಲಿವೆ. ಅವುಗಳನ್ನು 25 ವರ್ಷಗಳ ಹಿಂದೆ ಖರೀದಿಸಲಾಗಿತ್ತು. ಹಳೆಯ ಯುದ್ಧನೌಕೆಗಳ ಬದಲು ಹೊಸ ಸ್ಕೋರ್ಪೀನ್ ಜಲಾಂತರ್ಗಾಮಿಗಳನ್ನು ಪಡೆಯಲು ಸರ್ಕಾರ ನಿರ್ಧರಿಸಿತ್ತು. ಆದರೆ ಸ್ಕೋರ್ಪೀನ್ ಕಾರ್ಯಕ್ರಮ ಆರಂಭಗೊಳ್ಳುವಲ್ಲಿ ವಿಳಂಬವಾಗಿದ್ದು, ಯೋಜನೆ ಪ್ರಗತಿ ಕಂಡಿಲ್ಲ. ಹಲವಾರು ಸಂದರ್ಭಗಳಲ್ಲಿ ತಮ್ಮ ಯುದ್ಧ ಹಡಗುಗಳ ದುರಸ್ತಿಗೂ ಅವರ ಬಳಿ ಹಣವಿರಲಿಲ್ಲ. ಸಿಂಧು ರತ್ನಾ ದುರ್ಘಟನೆ ವಿಚಾರದಲ್ಲಿ, ಗುತ್ತಿಗೆ ನೀಡುವ ಪ್ರಕ್ರಿಯೆಯಲ್ಲಿ ಉಂಟಾದ ವಿಳಂಬದಿಂದ ನೌಕೆಯ ಹಳೆ ಬ್ಯಾಟರಿಗಳನ್ನು ಬದಲಾಯಿಸುವಲ್ಲಿ ತಡವಾಯಿತು. ದುರ್ಘಟನೆಗೆ ಇದೇ ಮುಖ್ಯ ಕಾರಣವಾಯಿತು. ಸಿಎಜಿ ಸಂಸ್ಥೆಯೂ ಈ ಲೋಪಗಳನ್ನು ತನ್ನ 2008-09 ಹಾಗೂ 2010-11ರ ವರದಿಗಳಲ್ಲಿ ಸೂಚಿಸಿದೆ.

(ಇಆರ್.ಅರುಣ್ ಕುಮಾರ್ ಜೈನ್)<br>ಕಚೇರಿ ಕಾರ್ಯದರ್ಶಿ